‘ಮೋಹಕವಾಗಿ, ಗ್ಲಾಮರಸ್ ಆಗಿ ಕಾಣುವ ಸಿನಿಮಾರಂಗದ ಹೊಳಪಿನಲ್ಲಿ ನೈಜತೆಯಿಲ್ಲ. ಅಲ್ಲಿ ಸುಳಿದಾಡುತ್ತಿರುವ ಸಂಕಟ ಹಾಗೂ ನೋವಿನ ಕಾರ್ಮೋಡಗಳನ್ನು ಈ ಕೃತಕ ಹೊಳಪು ಹೊರಗಿನ ಲೋಕದಿಂದ ಮರೆಮಾಚಿದೆಯಷ್ಟೆ. ಕಣ್ಣು ಕೋರೈಸುವ ಬೆಳಕಿನ ಮಗ್ಗುಲಲ್ಲೇ ಕತ್ತಲೆಯ ಪ್ರಪಂಚವೂ ಇರುತ್ತದೆ...’

ಮಲೆಯಾಳಂ ಸಿನಿಮಾರಂಗದಲ್ಲಿ ಸಂಚಲನ ಉಂಟು ಮಾಡಿರುವ ನ್ಯಾಯಮೂರ್ತಿ ಹೇಮಾ ಸಮಿತಿ ವರದಿಯಲ್ಲಿನ ಸಾಲುಗಳಿವು. ಈ ಸಾಲುಗಳು ಮಲೆಯಾಳಂ ಚಿತ್ರರಂಗಕ್ಕೆ ಮಾತ್ರವಲ್ಲ; ಬೃಹತ್ ಉದ್ಯಮವಾಗಿ ಬೆಳೆದಿರುವ ಎಲ್ಲ ಭಾಷೆಗಳ ಚಿತ್ರೋದ್ಯಮಗಳಿಗೂ ಅನ್ವಯಿಸುವಂತಹದ್ದು; ಸಿನಿಮಾರಂಗದ ಗ್ಲಾಮರ್ ಹೊದಿಕೆಯಡಿಯಲ್ಲಿ ಅಡಗಿರುವ ಹುಳುಕಿನ ವಾಸ್ತವಿಕತೆಗೆ ಕನ್ನಡಿ ಹಿಡಿಯುವಂತಹದ್ದು.

ಮಲೆಯಾಳಂ ಚಿತ್ರರಂಗದಲ್ಲಾಗುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯದ ಅಧ್ಯಯನಕ್ಕೆ ಸಂಬಂಧಿಸಿದಂತೆ 2017ರಲ್ಲಿ ರಚಿತವಾದ ಹೇಮಾ ಸಮಿತಿಯಲ್ಲಿ ನಿವೃತ್ತ ನ್ಯಾಯಮೂರ್ತಿ ಕೆ. ಹೇಮಾ, ಹಿರಿಯ ನಟಿ ಶಾರದಾ, ನಿವೃತ್ತ ಐಎಎಸ್ ಅಧಿಕಾರಿ ಕೆ.ಬಿ. ವಲ್ಸಲ ಕುಮಾರಿ ಅವರಿದ್ದು, ಸಮಿತಿಯ ವರದಿ ಕಳೆದ ಆಗಸ್ಟ್ 19ರಂದು ಬಿಡುಗಡೆಯಾಗಿದೆ. 295 ಪುಟಗಳ ಈ ವರದಿಯಲ್ಲಿ ಕೇಳಿಬಂದ ಹೆಸರುಗಳು ಚಿತ್ರರಂಗದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದೆ. ಕೆಲವು ಹೆಸರಾಂತ ನಟರು, ನಿರ್ದೇಶಕರು, ನಿರ್ಮಾಪಕರ ಮೇಲೆ ಲೈಂಗಿಕ ದೌರ್ಜನ್ಯ ಆರೋಪಗಳು ದಾಖಲಾಗಿದ್ದು, ಚಿತ್ರರಂಗದ ಕರಾಳ ಮುಖವನ್ನು ಬಯಲಿಗೆಳೆದಿದೆ. ತನಿಖೆ ಮುಂದುವರೆದಿದೆ.

ಲೈಂಗಿಕ ದೌರ್ಜನ್ಯ ಹಾಗೂ ಕಿರುಕುಳ, ಪುರುಷಪ್ರಧಾನ ಮನಸ್ಥಿತಿ–ದಬ್ಬಾಳಿಕೆ, ಮೂಲಸೌಲಭ್ಯಗಳ ಕೊರತೆ, ಪ್ರಭಾವಿಗಳ ಗುಂಪುಗಾರಿಕೆ, ಮಹಿಳೆಯರ ದನಿ ಅಡಗಿಸುವಿಕೆ, ಜೂನಿಯರ್ ಕಲಾವಿದರ ದುರ್ಬಳಕೆ, ಸಂಭಾವನೆಯಲ್ಲಿನ ತಾರತಮ್ಯ– ಹೀಗೆ ಹಲವು ವಿಷಯಗಳು ಬೆಳಕಿಗೆ ಬಂದಿವೆ. ಕೆದಕಿದಷ್ಟೂ ಹೊರಬರುವ ಸತ್ಯದಂತೆ, ಕೆಲವು ನಟಿಯರು ಈವರೆಗೆ ಅದುಮಿರಿಸಿಕೊಂಡಿದ್ದ ನೋವಿನ ಕಥನಗಳನ್ನು ಬಿಚ್ಚಿಡುತ್ತಿದ್ದಾರೆ.

ಹೇಮಾ ಸಮಿತಿ ಉಂಟು ಮಾಡಿರುವ ಸಂಚಲನ, ಮಲೆಯಾಳಂ ಸಿನಿಮಾರಂಗ ಮಾತ್ರವಲ್ಲದೆ, ಇತರೆ ಭಾಷೆಯ ಸಿನಿಮಾರಂಗಗಳ ಸ್ಥಿತಿಗತಿಯನ್ನೂ ಒಮ್ಮೆ ಪುನರ್ ಪರಿಶೀಲನೆ ಮಾಡಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತಿದೆ. ಹೇಮಾ ಸಮಿತಿ ವರದಿ, ಚಿತ್ರೋದ್ಯಮದಲ್ಲಿ ಮಹಿಳೆಯರಿಗೆ ಸುರಕ್ಷತೆ ಕಲ್ಪಿಸಲು ಅತ್ಯುತ್ತಮ ಅವಕಾಶವಾಗಿಯೂ ಕಂಡುಬರುತ್ತಿದೆ.

ಈ ವಿದ್ಯಮಾನದ ಬೆನ್ನಲ್ಲೇ ಕನ್ನಡ ಚಿತ್ರರಂಗದಲ್ಲಿಯೂ ಇದೇ ರೀತಿಯ ಸಮಿತಿ ರಚನೆಗೆ ಒತ್ತಾಯ ಕೇಳಿಬಂದಿದೆ. ಕನ್ನಡ ಸಿನಿಮಾರಂಗದಲ್ಲಿಯೂ ಮಹಿಳೆಯರಿಗೆ ಸುರಕ್ಷತೆ, ಭದ್ರತೆ ಕಲ್ಪಿಸುವ ಕೆಲಸ ಆಗಬೇಕೆಂಬ ದನಿ ಇನ್ನಷ್ಟು ಗಟ್ಟಿಯಾಗಿದೆ.



## ಸಮಿತಿ ರಚನೆ ಆಗುವುದೇ?

ಕನ್ನಡ ಸಿನಿಮಾರಂಗದಲ್ಲಿ 2018ರಲ್ಲಿ ನಟಿ ಶ್ರುತಿ ಹರಿಹರನ್, ನಟ ಅರ್ಜುನ್ ಸರ್ಜಾ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದರು. ನಂತರದ ದಿನಗಳಲ್ಲಿ ಮತ್ತೆ ಕೆಲವು ನಟಿಯರು ತಮಗೆ ಕೂಡ ಅಹಿತಕರ ಅನುಭವಗಳು ಎದುರಾಗಿದ್ದವು ಎಂದು ಹೇಳಿಕೊಂಡಿದ್ದರು. ಈ ಮುನ್ನ ಚಿತ್ರರಂಗದಲ್ಲಿ ಕೆಲಸ ಮಾಡುವ ಮಹಿಳೆಯರ ಸಮಸ್ಯೆಗಳ ಪರಿಹಾರಕ್ಕೆ ‘ಫೈರ್’ (‘ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಅಂಡ್ ಈಕ್ವಾಲಿಟಿ’) ಹೆಸರಿನ ಸಂಸ್ಥೆಯೊಂದು 2017ರಲ್ಲಿ ಹುಟ್ಟಿಕೊಂಡಿತ್ತು. ಇದೀಗ ‘ಫೈರ್’ ಸಂಸ್ಥೆ ಮತ್ತೆ ದನಿಯೆತ್ತಿದೆ. ಕನ್ನಡದ ಕೆಲವು ಕಲಾವಿದರೂ ದನಿಗೂಡಿಸಿದ್ದು, ಲೈಂಗಿಕ ದೌರ್ಜನ್ಯ ಸೇರಿದಂತೆ ಕನ್ನಡ ಚಿತ್ರೋದ್ಯಮದಲ್ಲಿ ಮಹಿಳೆಯರು ಎದುರಿಸುತ್ತಿರುವ ಇತರೆ ಸಮಸ್ಯೆಗಳ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ನಿವೃತ್ತ

